(694)

SATYAVADI Oldest Newspaper of Mysore
Daily & Weekly Reg No. M 1299

ಸತ್ಯವಾದಿ

ಸಂಪುಟ 2ಂ ಸಂಚಿಕೆ 299 | ಬುಧವಾರ | 3—5—1943 | 3 ಪೈ

ಶಾಂತಿಸ್ಥಾಪನೆಗೆ ಫ್ರಾಂಕೊ ವಿನಂತಿ

ಮ್ಯಾಡ್ರಿಡ್ ಮೇ 10— ಟ್ರೇಡ್ ಹಾಲಿನಲ್ಲಿ ಜನರಲ್ ಫ್ರಾಂಕೋ ಮಾತನಾಡುತ್ತಾ "ಶಾಂತಿ ಸ್ಥಾಪನೆಯ ಬಗ್ಗೆ ಬರ್ತ್ತಿರುವ ಮನವಿಗೆ ಯುದ್ಧದಲ್ಲಿ ಭಾಗವಹಿಸುತ್ತಿರುವವರು ಕಿವಿಗೊಡದಿದ್ದ ಮಾತ್ರಕ್ಕೆ, ಈ ಯುದ್ಧ ಪರಿಸಮಾಪ್ತಿಗೆ ಸಾಧನವಿಲ್ಲವೆಂದು ಹೇಳಕೂಡದು. ಯುದ್ಧವು ಕಟ್ಟಕಡೆಯ ಸ್ಥಿತಿಗೆ ಬಂದಿದೆ, ಎಂದು ಹೇಳಿದುದಲ್ಲದೆ "3 ವರ್ಷದ ಹೋರಾಟದ ನಂತರವೂ ಶಾಂತಿ ಸ್ಥಾಪನೆಯನ್ನ ತಡವಾಡುವುದು ತಪ್ಪೆಂದು ಹೇಳಿ, ಶಾಂತಿ ಸ್ಥಾಪನೆ ಮಾಡಿರೆಂದು, ರಾಷ್ಟ್ರಗಳಿಗೆ ಬುದ್ಧಿವಾದವನ್ನಿತ್ತನು.

ಜಪಾನ್ ಸಬ್‌ಮೆರಿನ್— ಸೋಮವಾರ ಅಮೇರಿಕಾ ವೆಸ್ಟ್ ಇಂಡೀಸಿನ ಸಮೀಪದಲ್ಲಿ ಅಮೇರಿಕನ್ ವಿಮಾನವು ಒಂದು ಜಪಾನ್ ಸಬ್‌ಮೆರೀನನ್ನು ಸೀರಿನಪಾಲುಮಾಡಿತು.

ಫ್ರೆಂಚು ರೇವು ಪಟ್ಟಣ— ಫ್ರೆಂಚರ ರಿವಿಯನ" ರೇವನ್ನು ಜರ್ಮನರು ಬಲಪಡಿಸುತ್ತಿರುತ್ತಾರೆ.

ರಹದಾರಿ ಇಲ್ಲ— ಹಿಂದೆ ನಾವು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಇಬ್ಬರು ಹೆಣ್ಣುಮಕ್ಕಳು ಅಮೇರಿಕಾಕ್ಕೆ ವ್ಯಾಸಂಗ ಮಾಡಲು ಹೋಗುತ್ತಾರೆಂದು ತಿಳಿಸಿದ್ದೆವಷ್ಟೆ. ಅದಕ್ಕೆ ಸರ್ಕಾರದವರು ಅನುಮತಿ ಕೊಡಲಿಲ್ಲ.

ನಿರಾಕರಣೆ— ಇದೇ ವರ್ಷ ಏಪ್ರಿಲ್ 29 ರಲ್ಲಿ ರಷ್ಯಾ ವಿಮಾನವು ಸ್ವೀಡಿಷ್ ವೆರಕೋ ದ್ವೀಪವನ್ನು ಧಾಳಿ ಮಾಡಿದವೆಂದು ಸ್ವೀಡನ್ನು ಬರೆದು ಕಳಿಸಿ, ಆ ವಿಮಾನವು ತಮ್ಮದಲ್ಲವೆಂದು ರಷ್ಯನರು ಉತ್ತರ ಕೊಟ್ಟರು.

ಪ್ರತಿಬಂಧಕ— ಮೈಸೂರು ದೇಶದಿಂದ ಯಾರೂ ಡಿ॥ ಮ್ಯಾಜಸ್ಟ್ರೇಟರ ಅಪ್ಪಣೆಯಿಲ್ಲದೆ ರಾಸುಗಳನ್ನು ಕಳಿಸಿಲೆಲಾಗದೆಂದು ಸರ್ಕಾರಿ ಆಜ್ಞೆಯಾಗಿದೆ.

ಕಮ್ಯುನಿಸ್ಟ್ ಪಾರ್ಟಿ— ಈಗ 8 ವರ್ಷದಿಂದ ಬಚ್ಚಿಹಿರಂಗವಾಗಿ ನಡೆಯದಿದ್ದ ಕಮ್ಯೂನಿಸ್ಟ್ ಪಾರ್ಟಿ ಸಭೆಯು ಮುಂದಿನ ತಿಂಗಳು 23 ರಲ್ಲಿ ಬೊಂಬಾಯಿನಲ್ಲಿ ಸೇರುವದು. ಈ ಸಭೆಯು ಒಂದು ವಾರ ನಡೆಯುವದು. ಈ ಸಭೆಯ ಉದ್ದೇಶವು ಇಂಡಿಯಾದ ನಾನಾ ಭಾಗದಿಂದ ಬರುವ ಪದಸ್ಯರ ಮನೋಭಾವವನ್ನು ತಿಳಿಯುವುದು, ಮತ್ತು ಮುಂದೇನು ಮಾಡಬೇಕೆಂಬುದನ್ನು ನಿರ್ಣಯಿಸುವುದೂ ಆಗಿದೆ. ಕಳೆದ ಎಂಟು ವರ್ಷಗಳಿಂದ ಕಮ್ಯೂನಿಸ್ಟರು ಗುಪ್ತವಾಗಿದ್ದರು ಅಥವಾ ಜೈಲಿನಲ್ಲಿದ್ದರು. 120 ಮಂದಿ ಪದಸ್ಯರು ಚುನಾಯಿತರಾಗಿರುವರು. ಅಲ್ಲದೆ ಇವರ ಗುಂಪಿಗೆ ಸೇರಿದವರಲ್ಲಿ 150 ಮಂದಿಯನ್ನು ಕರೆಸುವರು, ಕಾಮರೇಡ್ ಜೋಷಿಯವರು ರಿಪೋರ್ಟನ್ನು ಓದುವರು.

ಸ್ಕೂಲ್ ಮಾಸ್ಟರುಗಳೇ ಇದನ್ನು ಓದಿ?

ಅಮೇರಿಕಾದಲ್ಲಿ ಒಬ್ಬ ಸ್ಕೂಲ್ ಮಾಸ್ಟರಿಗೆ ಕೋರ್ಟಿನಲ್ಲಿ ಜುಲ್ಮಾನೆ ವಿಧಿಸಿದನು. ಜುಲ್ಮಾನೆ ಹಣ ಕೊಡಲು ಗತಿಯಿಲ್ಲದಿದಲು 'ತಾನು ಇನ್ನು ಮೇಲೆ ಇಂಥ ಕೆಲಸವನ್ನು ಮಾಡುವುದಿಲ್ಲ' ಎಂದು ಒಂದು ಹಲಗೆಯ ಮೇಲೆ 100 ಸಾರಿ ಬರೆದರು.

ಹೊಸ ಆರ್ಡಿನೆನ್ಸು

ಫೆಡರಲ್ ಕೋರ್ಟ್ ತೀರ್ಮಾನದ ಮೇಲೆ ಸೈಸಂಖ್ಯಾಯುತ ವಾತೆ ಹೊಸ ಆರ್ಡಿನೆನ್ಸನ್ನು ಜಾರಿಗೆ ತಂದಿದ್ದಕ್ಕೆ ಪಾರ್ಲಮೆಂಟಿನ ಸದಸ್ಯರಾದ ಮಿ॥ ಸೋಲೆಸೆನ್ನರು ಸದ್ಯದಲ್ಲಿಯೇ ಮಿ॥ ಎನರಿ ಯವರಿಗೆ ಒಂದು ಪ್ರಶ್ನೆಯನ್ನು ಹಾಕ್ಕುವರು.]

ಪ್ರಪಂಚದ ಶಾಂತಿ

ಅಮೇರಿಕಾದ ವರ್ತಮಾನ ಪತ್ರಿಕೆಗಳಲ್ಲಿ— ಪ್ರಪಂಚದಲ್ಲಿ ಶಾಂತಿ ನೆಲೆಗೊಳ್ಳಲು, ಇಂಗ್ಲೆಂಡ್, ಅಮೇರಿಕಾ, ರಷ್ಯಾ, ಚೈನಾ, ಇವು ನಾಲ್ಕೂ ಮತ್ತು ಎಂಟು ಚಿಕ್ಕ ರಾಜ್ಯಗಳ ಪ್ರತಿನಿಧಿಗಳೂ ಒಂದು ಕಮಿಟಿ ಮಾಡಿಕೊಂಡು, ಇವರು ಹೇಳಿದಂತೆ ನಡೆಯುತ್ತಾ ಬರುವಹಾಗೆ ಮಾಡುವುದು ಒಳ್ಳೇದೆಂದು ಸೂಚಿಸಿವೆ

ಸಿನಿಮಾ ತಾರೆ ಚಲನಚಿತ್ರ ಬಿಡುವಳೇ!

ಒಸಂತ್, ಕಿನ್‌ಮಿಟ್ ಫಿಲಂಗಳಲ್ಲಿ ನಟಿಸಿ ಖ್ಯಾತಿಗೊಂಡ ಕುಮಾರಿ ಜಾಶಾತಿಯು ಇನ್ನು ಮುಂದೆ ಯಾವ ಫಿಲಂಗಳಲ್ಲಿಯೂ ನಟಿಸುವುದಿಲ್ಲವೆಂದು ಮುಂಬೈ ಪತ್ರಿಕೆಯೊಂದು ತಿಳಿಸುತ್ತದೆ.

ಬೆಳಿಗ್ಗೆ ನಾಟಿ, ಸಾಯಂಕಾಲ ಕಟಾವು, ರಾತ್ರಿ ಊಟ!

ಬೆಳಿಗ್ಗೆ ತರಕಾರಿ ಜೀಜಿಬೆತ್ತ, ಮಧ್ಯಾಹ್ನ ನಾಟಿ ಹಾಕಿ, ಸಾಯಂಕಾಲ ಕಟಾವು ಮಾಡಿ, ರಾತ್ರಿ ಊಟಮಾಡುವುದು! ಇದು ನಿಮಗೆ ಆಶ್ಚರ್ಯವನ್ನುಂಟು ಮಾಡಿಬಹುದು ಮತ್ತು ಇವನ್ನು ನೀವು ನಂಬಿಸ್ವಬಹುದು. ಈ ಕಥೆಯು ನಾರ್ವೆಯ ಉತ್ತರ ಭಾಗದಲ್ಲಿ ನಡೆಯುತ್ತಿರುವುದು.

ಯೋತಕ್ಕೆ ಚೈನಾ ಹಿಂದೆ ಬಿದ್ದಿದೆ

ಚೈನಾದಲ್ಲಿ ವಿಶೇಷವಾಗಿ ಕಚ್ಚಾ ಪದಾರ್ಥಗಳು ಸಿಕ್ಕಿದರೂ ಯಾತಕ್ಕೆ ಯುದ್ಧೋದ್ಯಮಕ್ಕೆ ಬೇಕಾದ ಪದಾರ್ಥಗಳನ್ನು ತಯಾರು ಮಾಡದಿದ್ದಲ್ಲವೆಂದು ಚಿಸರಲ್ ಜಾಂಗ್ ಕೈ ಷಿಕ್‌ರವರನ್ನು ಕೇಳಲು, ಚಿಸರಲ್‌ರವರು "ಚೈನಾವು ಫಾಲಿಟಿಕ್ಸ್‌ನಲ್ಲಿ ಕೈ ಹಾಕದಿರುವುದೇ ಕಾರಣ. ಅಂಥದೆ ಕಾರ್ಖಾನೆಗಳು ರಾಜನೀತಿಯು ಒಂದಕ್ಕೊಂದು ಹೇರಿಕೊಂಡಿರಬೇಕು" ಎಂದರು.

ಗೋರಿಂಗ್ ಇಟಲಿಗೆ ಬಂದನು.

ಸೋಮವಾರ ಗೋರಿಂಗ್ ರೋಂ ನಗರಕ್ಕೆ ಬಂದು, ಮುಸೋಲಿನಿ ಕೂಡ ದೀರ್ಘ ಕಾಲ ಮಾತನಾಡಿದನು. ಅಲ್ಲಿಂದ ಸೇಪಲ್ಸಿಗೆ ವಿಮಾನದಲ್ಲಿ ಹಾರಿ ಹೋದನು. ನಂತರ ಜರ್ಮನ್ ಕಮ್ಯಾಂಡರ್ ಸಂಗಡ ಮಾತನಾಡಿದನು ಗೋರಿಂಗ್ ಮುಸೋಲಿನ ಮಾತ್ಕತೆಗಳು ಮುಗಿದ ಕೂಡಲೇ ಇಟಲಿ ಮಂತ್ರಿಮಂಡಲವು ಗುಟ್ಟಾಗಿ ಸೇರಿತ್ತೆಂದು ಮಾಸ್ಕೋ ರೇಡಿಯೋ ವರ್ತಮಾನ.

ಹುಡುಗಿ ಈಗ ಹುಡುಗ

17 ವರ್ಷದ ಹುಡುಗಿ ಈಗ 17 ವರ್ಷದ ಹುಡುಗನಾಗಿದ್ದಾನೆ. ಇವನು ಫಿಲ್ಟ್‌ಫಟ್ ಹಳ್ಳಿಯಲ್ಲಿರುವನು. ಡಿಸೆಂಬರ್ 14 ರಿಂದ ದಿನೇದಿನೇ ಗಂಡಾಗುವ ಚಿಹ್ನೆ ಕಾಣುತ್ತಾ ಬಂದು ಈಗ ಪೂರ್ತಿ ಗಂಡಾಗಿರುವನು. ಪೂರ್ವ ಜನ್ಮದ ಸೈಯದ್ ಕಾರ್ಟೂ ಈಗ ಸೈಯದಲ್ಲಾ!

ಯುದ್ಧ ವಸ್ತು ಪ್ರದರ್ಶನ

ಈಗ ಬೊಂಬಾಯಿಲ್ಲಿ ನಡೆಯುತ್ತಿರುವ ಯುದ್ಧ ವಸ್ತು ಪ್ರದರ್ಶನಕ್ಕೆ ಪ್ರತಿ ದಿವಸವೂ 1 ಲಕ್ಷಕ್ಕೆ ಕಡಮೆಯಿಲ್ಲದೆ ಪ್ರೇಕ್ಷಕರು ಹೋಗುತ್ತಿರುವರು.

ಒಂದು ಅಂದರೆ ಯಾವುದು?

ಐರ್ಲೆಂಡಿನ ಪಾರ್ಲಿಮೆಂಟನಲ್ಲಿ ಡಿವಾಲೆರವರು ಮಾತನಾಡುತ್ತಾ, ಐರ್ಲೆಂಡಿಗೂ ಇಂಗ್ಲೆಂಡಿಗೂ ಇರುವ ಎಲ್ಲಾ ವೈತ್ಯಾಸಗಳೂ ಬಗೆ ಹರಿದಿವೆ ಎಂದೂ, ಒಂದು ಮಾತ್ರ ಇನ್ನೂ ಬಗೆಹರಿದಿಲ್ಲವೆಂದೂ ಹೇಳಿದರು. ಈ ಒಂದು ಅಂದರೆ ಯಾವುದು!

ಮಿ॥ ಚರ್ಚಿಲ್ಲರಿಗೆ ನಿಧಿ

ಬ್ರಿಟಿಷ್ ಮಂತ್ರಿಯವರ ವಂಶೀಕರಾದ ಲಾಡ್ ಕಿನ್ಸ್‌ಟೋ ಚರ್ಚಿಲ್ಲರೂ ಅವರ ಸಂಬಂಧಿಗಳೂ, ಅಮೇರಿಕಾದಲ್ಲಿ ಚಂದಾ ಎತ್ತಿತ್ತಿರುವರು. ಎಷ್ಟು ಎನ್ನುವುದು ಇನ್ನೂ ಗೊತ್ತಿಲ್ಲ ಹೀಗೆ ವಸೂಲಾದುದನ್ನು ಬ್ರಿಟಿಷ್ ಮುಖ್ಯ ಮಂತ್ರಿಯವರಿಗೆ ಕೊಟ್ಟು, ಅವರು ಅದನ್ನು ಅವರು ತಮಗೆ ಬೇಕೆನಿಸಿದ ರೀತಿಯಲ್ಲಿ ಏನಿಬೇಕಾಗಿನಾಡಲು ಅನುಮತಿ ಕೊಟ್ಟಿರುತ್ತಾರೆ.

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

ಎಲ್ಲೆಲ್ಲಿ ಏನೇನು ?

ಬೊಂಬಾಯಿ, ಕಲ್ಕತ್ತಾ ವ ದರಾಸು ಲಾಹೋರು ಮತ್ತು ಇನ್ನು ಕೆಲವು ಸ್ಥಳ ಗಳಲ್ಲಿ ಏಕಕಾಲದಲ್ಲಿ ವೃತ್ತಪತ್ರಿಕೆಯ ನ್ನು ಸೇಟ್ ಡಾಲ್ಮಿಯರವರು ನಡೆಸುವ ರೆಂದೂ, ಇದಕ್ಕಾಗಿ 2 ಕೋಟಿ ರೂಪಾ ಯಿಗಳನ್ನು ಏರ್ಪಾಟುಮಾಡಿಟ್ಟಿರುವರೆಂದೂ ತಿಳಿಯಬರಿದಿದೆ.

ಈಗಿನ ಅಂದಾಜಿನಂತೆ ಅಮೆರಿಕಾಕ್ಕೆ ಯುದ್ಧದ ಖರ್ಚು 5600 ಮಿಲಿಯನ್ ಡಾಲರು ಆಗುವುದೆಂದು ಗೊತ್ತಾಗುವುದು.

ಪೋಲಂಡಿನಲ್ಲಿದ್ದ ಗೆಸ್ಟಾಪೊ ಮುಖ್ಯಸ್ಥನನ್ನು ಯಾರೋ ಪೋಲೆಂಡಿನವರು ಕೊಂದರು. ಪೋಲೆಂಡಿನಲ್ಲಿ ಇವನ ಹಾವಳಿ ತಡೆಯಲು ಯಾರಿಗೂ ಆಗುತ್ತಿರಲಿಲ್ಲ.

ಗಾಂಧೀಜಿ ಮತ್ತು ಡಾ|| ಜಿನ್ನಾರವರು ರಿಟೈರಾಗುವುದು ಒಳ್ಳೇದೆಂದು ಡಾ|| ಅಮ್ಬೇಡ್ಕರ್‌ರವರು ಬಾಂಬಯಿನಲ್ಲಿ ಹೇಳಿದರು

ಜಪಾನಿಯರು ಹೆಚ್ಚಾಗಿ ಮತ್ತೆ ಸೈನ್ಯಗಳನ್ನು ಸಾಂಕಾಂಗ್ ಪಶ್ಚಿಮದಲ್ಲಿ ತಂದಿಳಿಸಿರುತ್ತಾರೆ.

ಮುಂದಿನ ವೈಸರಾಯರು ಲಾರ್ಡ್ ಸ್ವಿಂಟರ್‌ರವರು ನೇಮಕರಾಗುವರೆಂದು ಲಂಡನ್‌ನಲ್ಲಿ ವದಂತಿ ಹಬ್ಬಿರುವುದು.

ಹೈದರಾಬಾದಿನಲ್ಲಿ 6 ಕೋಟಿ ರೂಪಾಯಿನಷ್ಟು ಕೂಡಿಟ್ಟಿರುತ್ತಾರೆ ಇಲ್ಲವೇ ಕರಗಿಸಿದ್ದಾರೆ, ಇಲ್ಲವೇ ಹೊರಗೆ ಸಾಗಿಸಿದ್ದಾರೆ, ಅದುದರಿಂದ ಈಗ ಚಲಾವಣೆಗೆ ತುಂಬಾ ಕಷ್ಟವಾಗಿದೆಯಾಗಿ, ಕಾಗದದ ನೋಟುಗಳನ್ನು ಚಲಾವಣೆಗೆ ತರಬೇಕಾಗಿ ಬಂದಿತು, ಎಂದು ಪ್ರಕಟಿಸಿರುತ್ತಾರೆ.

ಇನ್ನುಮೇಲೆ ಟ್ಯೂಬಿಲ್ಲದ ಸೈಕಲ್ ಗಳನ್ನು ಅಮೆರಿಕಾದಲ್ಲಿ ತಯಾರು ಮಾಡುವರು.

ಫ್ರಾನ್ಸಿನಲ್ಲಿ ಆಹಾರ ಪದಾರ್ಥಗಳನ್ನು ನಾಜಿಗಳು ಲೂಟಿಮಾಡುತ್ತಿರುವುದರಿಂದ ಅಲ್ಲಿನ ವೈದ್ಯರು ಇಲಿಗಳನ್ನು ತಿನ್ನಿ ಆದರಿಂದ ದೇಹಕ್ಕೆ ಕಡಿಕಿಲ್ಲ ಎಂದು ಹೇಳುತ್ತಿರುವರು

ಇದುವರೆಗೆ ರಷ್ಯಾ ಸರ್ಕಾರನ ಲೆಖ್ಖದ ಪ್ರಕಾರ 50 ಲಕ್ಷದಲ್ಲಿ 30 ಲಕ್ಷ ಗಾಯಗೊಂಡ ಸೈನಿಕರಿರುವರು. ಇವರನ್ನು ಯಾವ ರೀತಿಯಲ್ಲಿ ಚಿಕಿತ್ಸೆ ಮಾಡಬೇಕೆಂಬುದೇ ರಷ್ಯನರ ಪ್ರಶ್ನೆಯಾಗಿತ್ತು. ಈ 30 ಲಕ್ಷದಲ್ಲಿ ಶೇಕಡ 70 ರಂತೆ ಗಾಯಗೊಂಡವರನ್ನು ಗುಣಪಡಿಸಿ ಪ ತ್ತೆ ರಣರಂಗಕ್ಕೆ ಕಳುಹಿಸಿರುವರು. ಗಾಯಗೊಂಡವರಲ್ಲಿ ಶೇಕಡ ಒಂದೂವರೆಯಷ್ಟು ಮಾತ್ರ ಸತ್ತಿರುವರು.

ವರ್ತಮಾನ ಸಂಗ್ರಹ

ಇಂಡಿಯಾ ಸಮಸ್ಯೆಯನ್ನು ಮಿ|| ಅಮೆರಿಯವರು ಸಲಭವಾಗಿ ಪರಿಹರಿಸಿ ಬಹುದೆಂದು ಅಮೆರಿಕಾದವರು ಹೇಳಿರುವರು.

ಜರ್ಮನರು ಸೋವಿಯೆಟ್ ಪ್ರಾಂತ್ಯ ಸರಹದ್ದಿನಲ್ಲಿ ಟೈಫಾಯಿಡ್ ಜ್ವರದ ಹುಳುಗಳನ್ನು ಹಾಕುತ್ತಿರುವುದನ್ನು ರಷ್ಯನರು ಖಂಡಿಸಿರುತ್ತಾರೆ.

ನಮ್ಮ ಹಾಗೆ ನಕ್ಷತ್ರಗಳಿಗೂ ಜನನ ಮರಣ ಉಂಟು. ಒಂದು ನಕ್ಷತ್ರದ ಗುಂಪು 10 ರಿಂದ 50 ಲಕ್ಷ ದನರೆಗೆ ಜೀವಿಸುತ್ತದೆಂದು ಡಾ|| ಚಂದ್ರಶೇಖರರವರು ಮೆಕ್ಸಿಕೋದಲ್ಲಿ ಹೇಳಿದರು.

ಹಿಂದೂಸ್ಥಾನದಲ್ಲಿ 2703 ಪಟ್ಟಣಗಳೂ 6,55,892 ಹಳ್ಳಿಗಳೂ ಇರುವುವು.

ಹಿಂದೂಸ್ಥಾನದ ಒಟ್ಟು ಜನಸಂಖ್ಯೆಯು 38 ಕೋಟಿ 89 ಲಕ್ಷ 97ಸಾವಿರ 955 ಇದರಲ್ಲಿ 4 ಕೋಟಿ 66 ಲಕ್ಷ 9ಸಾವಿರ 57ಜನರು ಪಟ್ಟಣಗಳಲ್ಲಿಯೂ 3 ಕೋಟಿ 93 ಲಕ್ಷ 1 ಸಾವಿರ 9೧2 ಜನರು ಹಳ್ಳಿಗಳಲ್ಲಿಯೂ ಇದ್ದಾರೆ

ಪ್ರತಿಯೊಂದು ಸಾವಿರ ಪುರುಷರಿಗೂ 935 ರಂತೆ ಸ್ತ್ರೀಯರಿದ್ದಾರೆ.

ಮದರಾಸು ಪರಿಸ್ಥಾನಗಳಲ್ಲಿ ಪುರುಷರಿಗಿಂತ ಸ್ತ್ರೀಯರು ಹೆಚ್ಚು ಇದ್ದಾರೆ.

ಪಂಜಾಬಿನಲ್ಲಿ ಸಾವಿರ ಪುರುಷರಿಗೆ 847 ಸ್ತ್ರೀಯರ ಪ್ರಮಾಣವಿರುತ್ತದೆ.

5707 ಮುಸಲ್ಮಾನರೂ, 2057 ಹಿಂದೂಗಳೂ 1322 ಸಿಕ್ಕರೂ ಇದ್ದಾರೆ ಬಂಗಾಳದಲ್ಲಿ 10 ಸಾವಿರ ಜನರಲ್ಲಿ 5473 ಮುಸಲ್ಮಾನರೂ, 4115 ಹಿಂದೂಗಳೂ ಇದ್ದಾರೆ.

ಸೂರ್ಯಗ್ರಹಣದಲ್ಲಿಯೂ ಚಿನ್ನವಿದೆ ಎಂದು ಈಗ ಗೊತ್ತುಹಚ್ಚಿರುತ್ತಾರೆ. ಸೂರ್ಯನಲ್ಲಿ ಸುಮಾರು 92 ದ್ರವ್ಯವಿದೆ ಈಗ 65 ದ್ರವ್ಯಗಳನ್ನು ಕಂಡುಹಿಡಿದಿರುವರು

ಇರಾಕಿನ ರಾಜರಿಗೆ ಅವರ ವರ್ಧಂತ್ಯುತ್ಸವದ ಸಮಯದಲ್ಲಿ ಬ್ರಿಟಿಷರು ಅವರಿಗೆ ರೇಡಿಯೊ ಟ್ರಾನ್ಸ್‌ಮಿಟರ್‌ನನ್ನು ಬಹುಮಾನ ಕೊಟ್ಟರು

ಡೆನಿಷ್ ನೌಕೆಗಳು ಮಿತ್ರವರ್ಗದವರ ನೌಕೆಗಳ ಸಂಗಡ ಸೇರಿ ಯುದ್ಧಮಾಡುವುವು

ಇಂಡಿಯಾ ವಿಷಯದಲ್ಲಿ ಅಮೆರಿಕಾದವರ ಕೈ ಹಚ್ಚಬೇಕೆಂದು ಅಮೆರಿಕ ಅಭಿಪ್ರಾಯ ಎಂದು ಡಾ || ಗಯ್ ಎಮರಿ ಫಿಲಿಫ್‌ರವರು ಸ್ಯೂ ಗ್ರೂಪಿನ ಪರವಾಗಿ ಹೇಳುತ್ತಾರೆ.

At..... New Opera Talkies

COURT DANCER

— ನಾಳೆಯ ದಿವಸದಿಂದ —

ಆರ್ಯಮಾಲಾ ! ಆರ್ಯಮಾಲಾ ! ಆರ್ಯಮಾಲಾ !

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಸ್ಟೂಡಿಯೊ— ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

SHAKTI SUDHA

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಬೆಲೆ 1 ರೂಪಾಯಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ಪಸ್ಮೋಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ.

A Panacea for All Debilites

ಚಂದಾದಾರರಲ್ಲಿ ವಿನಂತಿ

ಆಫೀಸಿನಲ್ಲಿನ ಕೆಲವು ಅನಾನುಕೂಲಗಳಿಗಾಗಿ 2–3 ದಿನಗಳು ಪತ್ರಿಕೆಯನ್ನು ಪ್ರಕಟಿಸಲಾಗಲಿಲ್ಲ. ಇನ್ನು ಮುಂದೆ ಪತ್ರಿಕೆಯು ಸರಿಯಾಗಿ ಪ್ರಕಟಿಸಲ್ಪಟ್ಟು ಅನೇಕ ವಿಷಯಗಳನ್ನೊಳಗೊಂಡಿರಲು ತಕ್ಕ ವಿಚಾರಣೆಯನ್ನು ಮಾಡಲಾಗಿದೆ.

ಮ್ಯಾನೇಜರ್

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.